ವೈರಸ್, ಎಬೋಲಾ, ಸ್ವೈನ್ ಫ್ಲೂ, ಹಂದಿ ಜ್ವರ, ಹಕ್ಕಿ ಜ್ವರ (ಏವಿಯನ್ ಫ್ಲೂ), ಕಾಲರಾ, ಹೆಪಟೈಟಿಸ್ ಎ,ಬಿ,ಸಿ,ಡಿ,ಇ – ಹೀಗೆ ನಾನಾ ವೈರಾಣುಗಳ ಆಕ್ರಮಣಕ್ಕೆ ಸಿಕ್ಕು ಹೈರಾಣ ಆಗಿರುವುದು ನಮಗೆಲ್ಲ ತಿಳಿದೇ ಇದೆ.

16ನೇ ಶತಮಾನದ ಆರಂಭದಲ್ಲಿ ಮೆಕ್ಸಿಕೋದಲ್ಲಿ ಆಡಳಿತ ನಡೆಸುತ್ತಿದ್ದ ಅಜ್ಟೆಕ್ ಸಾಮ್ರಾಜ್ಯವು ಸಿಡುಬಿನ ಸೋಂಕಿನಿಂದ ಕೆಲವೇ ವಾರಗಳಲ್ಲಿ 80 ಲಕ್ಷ ಜನರನ್ನು ಕಳೆದುಕೊಂಡಿತ್ತು. ಪ್ಲೇಗ್ ಮಾರಿ ಬಂದಾಗ ಅಂದಿನ ಜನಸಂಖ್ಯೆಯ ಕಾಲು ಭಾಗವನ್ನು ಅಳಿಸಿಹಾಕಿತ್ತು. 20ನೇ ಶತಮಾನದ ಆರಂಭದಲ್ಲಿ ಅಪ್ಪಳಿಸಿದ ಸ್ಪ್ಯಾನಿಶ್ ಫ್ಲೂನಿಂದ 5 ಕೋಟಿ ಜನರು ಪ್ರಾಣಬಿಟ್ಟಿದ್ದರು. ಈ ಜಾಗತಿಕ ಆಪತ್ತುಗಳ ಎದುರು ಮನುಷ್ಯ ನಿಸ್ಸಹಾಯಕನಾಗಿ ಮಂಡಿಯೂರಿದ್ದ.

ಲಿವರ್, ರಕ್ತ, ಉಸಿರಾಟ ವ್ಯವಸ್ಥೆ, ಜೀರ್ಣಾಂಗ ವ್ಯವಸ್ಥೆ, ಮೆದುಳು, ಚರ್ಮ, ಜನನಾಂಗಗಳಲ್ಲೆಲ್ಲ ಆಶ್ರಯ ಪಡೆಯುವ ವೈರಸ್‌ಗಳು ಕೆಲವು ಬಗೆಯ ವೈರಸ್‌ಗಳನ್ನು ಉಂಟುಮಾಡುತ್ತವೆ. ಕೀಟ, ಪಕ್ಷಿ ಪ್ರಾಣಿಗಳ ಎಂಜಲು, ಕಲುಷಿತ ನೀರು, ಆಹಾರ, ರಕ್ತ, ದೇಹ ದ್ರವ, ಸ್ಪರ್ಶ, ಕೆಮ್ಮು, ಸೀನು, ಲೈಂಗಿಕ ಸಂಪರ್ಕದ ಮೂಲಕ ದೇಹ ಪ್ರವೇಶಿಸುವ ವೈರಸ್‌ಗಳು ಒಬ್ಬರಿಂದೊಬ್ಬರಿಗೆ ಸೋಂಕನ್ನು ವರ್ಗಾಯಿಸುತ್ತವೆ. ಗಂಡನಿಂದ ಹೆಂಡತಿಗೆ, ತಾಯಿಯಿಂದ ಮಗುವಿಗೆ, ಪ್ರಾಣಿ ಪಕ್ಷಿಗಳ ಎಂಜಲಿನಿಂದ ಅದನ್ನು ಸ್ಪರ್ಶಿಸುವ ಇತರರಿಗೆ ವೈರಸ್‌ಗಳು ಸೋಂಕನ್ನು ಹಬ್ಬಿಸುತ್ತವೆ.

ಸೋಂಕು ಹಬ್ಬಿಸಲು ಸೋಂಕಿತ ವ್ಯಕ್ತಿಯು ಇನ್ನೊಬ್ಬ ಆರೋಗ್ಯವಂತ ವ್ಯಕ್ತಿಯನ್ನು ಸ್ಪರ್ಶಿಸಲೇಬೇಕೆಂದಿಲ್ಲ. ಸೋಂಕಿತ ವ್ಯಕ್ತಿಯು ಮುಟ್ಟಿದ ವಸ್ತುವನ್ನು ಇತರರು ಮುಟ್ಟಿದರೂ ಅವರಿಗೆ ಸೋಂಕು ತಗಲುತ್ತದೆ. ಏಕೆಂದರೆ ಸೋಂಕಿತ ವ್ಯಕ್ತಿಯು ಸ್ಪರ್ಶಿಸಿದ ವಸ್ತುವಿನ ಮೇಲೆ ವೈರಸ್‌ಗಳು ಕೆಲಕಾಲ ಕ್ರಿಯಾಶೀಲವಾಗಿರುತ್ತದೆ.

### ಉಂಡ ಮನೆಗೆ ದ್ರೋಹ!

ಆತಿಥೇಯ ಅಥವಾ ಬಾಡಿಗೆ ಜೀವಕೋಶದ ಸಂಪರ್ಕ ಮತ್ತು ಪ್ರವೇಶದೊಂದಿಗೆ ವೈರಸ್‌ನ ವಿಧ್ವಂಸಕ ಕಾರ್ಯ ಶುರುವಾಗುತ್ತದೆ. ತನ್ನ ಸಂತಾನೋತ್ಪತ್ತಿ ಮಾಡಿಕೊಳ್ಳುವುದಲ್ಲದೆ, ಅತಿಥಿಯ ಜೀವಕೋಶದ ನಿಯಂತ್ರಣ ಸಾಧಿಸುವ ವೈರಸ್, ಇತರ ಜೀವಕೋಶಗಳ ಸ್ವರೂಪ ಬದಲಾಯಿಸುತ್ತದೆ, ಅವುಗಳಿಗೆ ಹಾನಿ ಮಾಡುತ್ತದೆ. ಕ್ರಿಯೆಯಲ್ಲಿ ಜೀವಕೋಶಗಳು ಸತ್ತರೆ ವ್ಯಕ್ತಿಯು ಸೋಂಕಿಗೆ ಒಳಗಾಗುತ್ತಾನೆ. ಆ ಸಮಯದಲ್ಲಿ ವೈರಸ್‌ಗಳು ತಮ್ಮ ಪ್ರತಿರೂಪಗಳನ್ನು ಸಿಕ್ಕಾಪಟ್ಟೆ ವೃದ್ಧಿಸಿಕೊಳ್ಳುತ್ತವೆ. ಜೀವಕೋಶಗಳು ಒಡೆದು ಹೊಸ ವೈರಸ್‌ಗಳು ಹೊರಬಂದು ಇತರ ಜೀವಕೋಶಗಳೆಡೆಗೆ ಪಯಣಿಸುತ್ತವೆ. ಇಷ್ಟೆಲ್ಲಾ ಜರುಗುವಾಗ ವ್ಯಕ್ತಿಯಲ್ಲಿ ಯಾವ ರೋಗಲಕ್ಷಣಗಳು ಕಾಣಿಸುವುದಿಲ್ಲ. ಆದರೆ ಅದು ಇನ್ನೊಬ್ಬ ವ್ಯಕ್ತಿಗೆ ಹಬ್ಬಿರುತ್ತದೆ. ಸೋಂಕು ಹಬ್ಬಿಸಲು ವೈರಸ್‌ಗಳು ತೆಗೆದುಕೊಳ್ಳುವ



ಕಾಲಾವಧಿ ಅಥವಾ ಇನ್‌ಕ್ಯುಬೇಷನ್ ಪೀರಿಯಡ್ ಒಂದರಿಂದ ಇನ್ನೊಂದಕ್ಕೆ ಬೇರೆಯದಾಗಿರುತ್ತದೆ.

### ತಿಳಿಯದು ವೈರಸ್‌ಗಳ ವಯಸ್ಸು

ವೈರಸ್‌ಗಳು ತಮ್ಮ ಹೆಜ್ಜೆಗುರುತುಗಳನ್ನು ಎಲ್ಲೂ ಬಿಡದಿರುವುದರಿಂದ ಇವುಗಳ ಪಳೆಯುಳಿಕೆ ಪತ್ತೆಯಾಗಿಲ್ಲ. ಯಾವುದೇ ಜೀವಿಯ ಆರಂಭಿಕ ಅಸ್ತಿತ್ವವನ್ನು ಮತ್ತು ವಿಕಾಸದ ಹಂತಗಳನ್ನು ಪಳೆಯುಳಿಕೆಗಳ ಆಧಾರದಲ್ಲಿ ಗುರುತಿಸಲಾಗುತ್ತದೆ. ಆಧುನಿಕ ವಿಜ್ಞಾನದ ಹಲವು ಥಿಯರಿಗಳ ಪ್ರಕಾರ ಭೂಮಿಯ ಮೇಲೆ ಮೊದಲ ಜೀವಕೋಶ ಹುಟ್ಟುವ ಮೊದಲೇ ವೈರಾಣುಗಳು ಇದ್ದವು ಎಂಬುದನ್ನು 'ವೈರಸ್ ಫಸ್ಟ್' ಊಹೆ ಆಧಾರದ ಮೇಲೆ ಹೇಳಲಾಗುತ್ತದೆ.

### ವೈರಸ್‌ಗಳಿಗೆ ಭಿನ್ನ ವಿಭಿನ್ನ ಹೆಸರು

ವೈರಸ್‌ಗಳು ಮತ್ತು ಅವು ಉಂಟುಮಾಡುವ ಕಾಯಿಲೆಗಳಿಗೆ ವಿಭಿನ್ನ ಹೆಸರುಗಳಿರುತ್ತವೆ. ಉದಾಹರಣೆಗೆ, ಏಡ್ಸ್ ಎಂಬುದು ಕಾಯಿಲೆಯ ಹೆಸರಾದರೆ, ಅದನ್ನು ಉಂಟುಮಾಡುವ ವೈರಸ್‌ನ ಹೆಸರು ಎಚ್‌ಐವಿ. ಹಂದಿ ಜ್ವರ ಎಂಬುದು ಕಾಯಿಲೆಯ ಹೆಸರಾದರೆ ಅದನ್ನು ಮನುಷ್ಯನಿಗೆ ಹಬ್ಬಿಸುವ ವೈರಸ್ ಎಚ್‌ಒನ್‌ಎನ್‌ಒನ್. ವಂಶವಾಹಿ ರಚನೆಯ ಆಧಾರದ ಮೇಲೆ ವೈರಸ್‌ಗಳ ನಾಮಕರಣ ನಡೆಯುತ್ತದೆ. ಪರೀಕ್ಷಾ ವಿಧಾನ ಲಸಿಕೆ ಮತ್ತು ಔಷಧಗಳನ್ನು ರೂಪಿಸಲು ಅನುಕೂಲವಾಗಲೆಂದು ಈ ರೀತಿ ಮಾಡಲಾಗುತ್ತದೆ. ಇಂಟರ್‌ನ್ಯಾಷನಲ್ ಕಮಿಟಿ ಆನ್ ಟ್ಯಾಕ್ಸೋನಮಿ ಆಫ್ ವೈರಸಸ್ (ಐಸಿಟಿವಿ) ಸಂಸ್ಥೆಯ ತಜ್ಞರು ಮತ್ತು ವಿಜ್ಞಾನಿಗಳ ನೆರವಿನಿಂದ ವೈರಸ್‌ನ ಹೆಸರನ್ನು ಅಂತಿಮಗೊಳಿಸುತ್ತದೆ. ವೈರಸ್‌ಗಳನ್ನು ಅವು ಪತ್ತೆಯಾದ ಊರು ಪ್ರದೇಶಗಳ ಹೆಸರಿನಿಂದಲೇ ಕರೆಯಲಾಗುತ್ತದೆ. ಉದಾಹರಣೆಗೆ, ಮಾರ್ಬರ್ಗ್ ವೈರಸ್. ಮಾರ್ಬರ್ಗ್ ಎಂಬುದು ಜರ್ಮನಿಯ ಒಂದು ಊರಿನ ಹೆಸರು. ವೈರಾಣುವು ಮೊದಲ ಬಾರಿಗೆ ಅಲ್ಲಿನ ಪ್ರಯೋಗಾಲಯದಲ್ಲಿ ಪತ್ತೆಯಾದದ್ದರಿಂದ ಆ ಹೆಸರು ಇಡಲಾಯಿತು. ಹಾಗೆಯೇ ಚಂಡಿಪುರ ವೈರಸ್ ಕೂಡ. ನಮ್ಮ ಗುಜರಾತ್ ರಾಜ್ಯದ ಚಂಡಿಪುರ ಎಂಬ ಊರಿನಲ್ಲಿ ಈ ವೈರಸ್ ಪತ್ತೆಯಾಗಿದೆ. ಹಾಗೆಯೇ ಹಾಂಕಾಂಗ್ ಮತ್ತು ಸ್ಪ್ಯಾನಿಶ್ ಫ್ಲೂಗಳಿಗೆ ಆಯಾ ಹೆಸರುಗಳು ಬಂದಿವೆ.

### ಚಿಕಿತ್ಸೆ, ಮುನ್ನೆಚ್ಚರಿಕೆಗಳೇನು?

ವೈರಾಣುಗಳ ಉಪಟಳವನ್ನು ಎದುರಿಸಲು ಆಂಟಿಬಯೊಟಿಕ್‌ಗಳನ್ನು ಏಕೆ ಬಳಸಬಾರದು ಎಂಬ ಪ್ರಶ್ನೆ ಅನೇಕ ಬಾರಿ ವ್ಯಕ್ತಗೊಳ್ಳುತ್ತದೆ. ಆಂಟಿಬಯೊಟಿಕ್‌ಗಳ ಪರಿಣಾಮವೇನಿದ್ದರೂ ಬ್ಯಾಕ್ಟೀರಿಯಾಗಳ ಮೇಲೆ ನಡೆಯುತ್ತದೆ. ವೈರಸ್‌ಗಳ ಮೇಲಲ್ಲ. ಆಂಟಿಬಯೊಟಿಕ್‌ಗಳು ಕೆಲಸ ಮಾಡಲು ಜೀವಕೋಶದ ಗೋಡೆ ಇರಬೇಕು. ವೈರಸ್‌ಗಳಿಗೆ ಜೀವಕೋಶವೇ ಇಲ್ಲ. ಹಾಗಾಗಿ ವೈರಾಣುಗಳನ್ನು ಮಣಿಸಲು ಆಂಟಿಬಯೊಟಿಕ್ ಪ್ರಯೋಜನಕ್ಕೆ ಬರುವುದಿಲ್ಲ.

ವೈರಸ್ ಗಳನ್ನು ಮಣಿಸಲು ಇರುವ ಏಕೈಕ ದಾರಿ ಎಂದರೆ ಲಸಿಕೆ. ಅದು ದೊರಕುವವರೆಗೂ ದೇಹವು ತನ್ನದೇ ರೋಗ ಪ್ರತಿರೋಧಕ ಶಕ್ತಿಯಿಂದ ವೈರಾಣುವಿನ ವಿರುದ್ಧ ಹೋರಾಡಬೇಕಾಗುತ್ತದೆ. ಚಿಕಿತ್ಸೆಯ ಹೆಸರಿನಲ್ಲಿ ನೀಡುವ ಆ್ಯಂಟಿ ವೈರಲ್ ಔಷಧಗಳು ಕಾಯಿಲೆ ಉಲ್ಬಣ ಗೊಳ್ಳುವುದನ್ನು ತಡೆಯುತ್ತವೆಯೇ ಹೊರತು ವೈರಸ್ ಗಳನ್ನು ನಾಶಪಡಿಸುವ ಶಕ್ತಿ ಅವುಗಳಿಗೆ ಇರುವುದಿಲ್ಲ. ಅನೇಕ ಮಾರಣಾಂತಿಕ ಕಾಯಿಲೆಗಳಿಗೆ ಈಗಾಗಲೇ ಲಸಿಕೆಗಳನ್ನು ಸಿದ್ಧಪಡಿಸಲಾಗಿದೆ ಮತ್ತು ನೀಡಲಾಗುತ್ತಿದೆ. ಸೋಂಕು ಹಾಗೂ ಸಾವಿನ ಪ್ರಮಾಣ ಎರಡೂ ದೊಡ್ಡ ಪ್ರಮಾಣದಲ್ಲಿ ತಗ್ಗಿವೆ.

### ಲಾಸ್ಟ್ ಡಿಫೆನ್ಸ್

ಪ್ರಾಣಿ ಪಕ್ಷಿಗಳು ವೈರಾಣುಗಳ ಆಕ್ರಮಣವನ್ನು ತಡೆಯುವ ನೈಸರ್ಗಿಕ ರಕ್ಷಣಾ ವ್ಯವಸ್ಥೆಗಳನ್ನು ಹೊಂದಿವೆ. ಮನುಷ್ಯನಲ್ಲಿ ಆ ಸವಲತ್ತು ಇಲ್ಲ. ಸಾಂಕ್ರಾಮಿಕ ಪಿಡುಗುಗಳನ್ನು ಎದುರಿಸುವ ಶಕ್ತಿ ನಮ್ಮ ವಿಜ್ಞಾನಕ್ಕಿದೆ. ಆದರೆ ಅದನ್ನು ನಿರ್ವಹಿಸುವ ವಿವೇಕ ನಮಗಿಲ್ಲ ಎನ್ನುವುದು ಹಿಂದಿನ ಎಲ್ಲ ಪ್ರಕರಣಗಳಲ್ಲೂ ಸ್ಪಷ್ಟವಾಗಿ ಗೊತ್ತಾಗಿದೆ.

ಪಿಡುಗುಗಳನ್ನು ನಿರ್ವಹಿಸಲು ಅಪಾರ ಧನರಾಶಿ ಬೇಕು. ಆಸ್ಪತ್ರೆ, ಲಸಿಕೆ, ವೈದ್ಯಕೀಯ ಸಿಬ್ಬಂದಿ, ಇತರ ಔಷಧಿಗಳು ಬೇಕೇ ಬೇಕು. ಬಡ ರಾಷ್ಟ್ರಗಳಿಗೆ ಇದೆಲ್ಲಾ ಎಲ್ಲಿ ಸಾಧ್ಯವಾದೀತು?

ಇದ್ದ ಬದ್ದ ಕಾಡೆಲ್ಲ ಬರಿದಾಗಿ, ಪರಿಸರದಲ್ಲಿ ಏರುಪೇರಾಗಿ ಜೀವ ಸರಪಳಿಯ ಒಂದೊಂದೇ ಕೊಂಡಿ ಕಳಚಿಕೊಂಡಾಗ ಕಾಡಿನ ಪ್ರಾಣಿಗಳು ನಾಡಿಗೆ ನುಗ್ಗುತ್ತವೆ; ಮನುಷ್ಯ ಅವುಗಳ ನೇರ ಸಂಪರ್ಕಕ್ಕೆ ಬರುತ್ತಾನೆ. ಆಗ ವೈರಸ್ ಮನುಷ್ಯನ ಜೀವಕೋಶಗಳಿಗೆ ನೇರ ಪ್ರವೇಶ ಪಡೆಯುತ್ತದೆ. ಜಗತ್ತು ವೈರಾಣುಗಳ ಮತ್ತೊಂದು ಆಕ್ರಮಣಕ್ಕೆ ಬಲಿಯಾಗುತ್ತದೆ. ಎಲ್ಲರಿಗೂ ಅನ್ನ–ನೀರು–ವಸತಿ ದೊರಕಿಸಿಕೊಡುವ ಸುಸ್ಥಿರ ಬದುಕು ನಮ್ಮದಾಗದಿದ್ದರೆ ವೈರಸ್‌ಗಳು ರಣಕೇಕೆ ಹಾಕುತ್ತಲೇ ಇರುತ್ತವೆ.

ಪ್ರತಿಕ್ರಿಯಿಸಿ: feedback@sudha.co.in